# ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

## ಮೇ ೦೭, ೨೦೨೨ರ ಶನಿವಾರದಂದು ನಡೆದ ಕಾರ್ಯಕಾರಿ ಸಮಿತಿ ೨೧೨ನೇ ಸಭೆಯ ನಡೆವಳಿಗಳು

| | |
|---|---|
| ೦೧. ಡಾ. ಸ.ಚಿ.ರಮೇಶ, ಮಾನ್ಯ ಕುಲಪತಿಗಳು, ಕವಿಹಂ | : ಅಧ್ಯಕ್ಷರು |
| ೦೨. ಪ್ರೊ. ಹೆಚ್.ಎಸ್. ರಘುನಾಥ, ಶಿವಮೊಗ್ಗ | : ಸದಸ್ಯರು |
| ೦೩. ಪ್ರೊ. ಹೆಚ್.ಎಂ. ಚನ್ನಪ್ಪಗೋಳ, ಬೆಳಗಾವಿ | : ಸದಸ್ಯರು |
| ೦೪. ಪ್ರೊ. ಜಿ.ಸಿ. ರಾಜಣ್ಣ, ಮೈಸೂರು | : ಸದಸ್ಯರು |
| ೦೫. ಶ್ರೀಮತಿ ನಯನಾ ಎಸ್., ಬೆಂಗಳೂರು | : ಸದಸ್ಯರು |
| ೦೬. ಶ್ರೀ ಜೈಭೀಮ್ ಆರ್.ಕಟ್ಟಿ, ಕಲಬುರಗಿ | : ಸದಸ್ಯರು |
| ೦೭. ಡಾ. ಓ. ಓಬಯ್ಯ, ಬೆಂಗಳೂರು | : ಸದಸ್ಯರು |
| ೦೮. ಶ್ರೀ ಸಮಿಉಲ್ಲಾ ಖಾನ್, ಬೆಂಗಳೂರು | : ಸದಸ್ಯರು |
| ೦೯. ಡಾ. ವೀರೇಶ ಬಡಿಗೇರ, ಡೀನ್, ಭಾಷಾ ನಿಕಾಯ, ಕವಿಹಂ | : ಸದಸ್ಯರು |
| ೧೦. ಡಾ. ಸಿ.ಎಸ್. ವಾಸುದೇವನ್, ಡೀನ್, ಸಮಾಜ ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೧೧. ಡಾ. ಮಾಧವ ಪೆರಾಜೆ, ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೧೨. ಡಾ. ರಮೇಶ ನಾಯಕ, ಹಣಕಾಸು ಅಧಿಕಾರಿಗಳು, ಕವಿಹಂ | : ವಿಶೇಷ ಆಹ್ವಾನಿತರು |
| ೧೩. ಡಾ. ಎ. ಸುಬ್ಬಣ್ಣ ರೈ, ಕುಲಸಚಿವರು, ಕವಿಹಂ | : ಪದನಿಮಿತ್ತ ಕಾರ್ಯದರ್ಶಿ |

**ಸಭೆಯಲ್ಲಿ ಅನುಪಸ್ಥಿತರಿದ್ದವರು:**

| | |
|---|---|
| ೦೧. ಶ್ರೀ ಪ್ರಶಾಂತ್ ಭೀಮಯ್ಯ, ಮಡಿಕೇರಿ | : ಸದಸ್ಯರು |
| ೦೨. ಡಾ. ಕೆ.ರವೀಂದ್ರನಾಥ, ಡೀನ್, ಲಲಿತಕಲೆಗಳ ನಿಕಾಯ, ಕವಿಹಂ | : ಸದಸ್ಯರು |
| ೦೩. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| ೦೪. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು | : ಸದಸ್ಯರು |
| ೦೫. ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |
| ೦೬. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | : ಸದಸ್ಯರು |
| ೦೭. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |

ಕುಲಸಚಿವರು ಕಾರ್ಯಕಾರಿ ಸಮಿತಿ ಸದಸ್ಯರನ್ನು ಮತ್ತು ಅಧ್ಯಕ್ಷರನ್ನು ಆರಂಭದಲ್ಲಿ ಸಭೆಗೆ ಸ್ವಾಗತಿಸಿದರು. ಮಂಡಿಸಲಾದ ಕಾರ್ಯಸೂಚಿಯ ಕುರಿತು ಚರ್ಚಿಸಿ, ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

**ವಿಷಯ** : ದಿನಾಂಕ ೧೪.೦೨.೨೦೨೨ರಂದು ನಡೆದ ಕಾರ್ಯಕಾರಿ ಸಮಿತಿಯ ೨೧೦ನೇ ಸಭೆಯ ನಡೆವಳಿಗಳ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು. (ಅನುಬಂಧ-೦೧)

**ನಿರ್ಣಯ** : ದಿನಾಂಕ ೧೪.೦೨.೨೦೨೨ರಂದು ನಡೆದ ಕಾರ್ಯಕಾರಿ ಸಮಿತಿ ೨೧೦ನೇ ಸಭೆಯ ನಡೆವಳಿಗಳನ್ನು ಪರಿಶೀಲಿಸಿ ಸಭೆಯು ಅನುಮೋದನೆ ನೀಡಿತು.

**ವಿಷಯ** : ದಿನಾಂಕ ೧೪.೦೨.೨೦೨೨ರಂದು ನಡೆದ ಕಾರ್ಯಕಾರಿ ಸಮಿತಿಯ ೨೧೦ನೇ ಸಭೆಯ ನಡೆವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡುವ ಕುರಿತು. (ಅನುಬಂಧ-೦೨)

**ನಿರ್ಣಯ** : ದಿನಾಂಕ ೧೪.೦೨.೨೦೨೨ರಂದು ನಡೆದ ಕಾರ್ಯಕಾರಿ ಸಮಿತಿಯ ೨೧೦ನೇ ಸಭೆಯ ನಡೆವಳಿಗಳ ಅನುಪಾಲನಾ ವರದಿಯನ್ನು ಸಭೆಯು ಪರಿಶೀಲಿಸಿ ನಿರ್ಣಯ ಸಂಖ್ಯೆ.೨೧೦.೨೪ಕ್ಕೆ ಸಂಬಂಧಿಸಿದಂತೆ ಈ ಕೆಳಗಿನಂತೆ ಕ್ರಮವಹಿಸಲು ಸೂಚಿಸಿ ಅನುಮೋದನೆ ನೀಡಿತು.

೧. ಕನ್ನಡ ವಿಶ್ವವಿದ್ಯಾಲಯದ ಮಾನ್ಯತಾ ಕೇಂದ್ರವಾದ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ಇದನ್ನು ವಿಶೇಷವಾಗಿ ಪರಿಗಣಿಸಿ, ಪಿಎಚ್.ಡಿ. ಪ್ರವೇಶಾತಿ ಸಂದರ್ಭದಲ್ಲಿ ಇತರ ಮಾನ್ಯತಾ ಕೇಂದ್ರಗಳಿಗಿಂತ ಹತ್ತು ಹೆಚ್ಚುವರಿ ಸ್ಥಾನಗಳಿಗೆ (ಒಟ್ಟು ೨೫) ಅವಕಾಶ ಕಲ್ಪಿಸುವುದು.

**ವಿಷಯ** : ದಿನಾಂಕ ೧೧.೦೪.೨೦೨೨ರಂದು ನಡೆದ ಕಾರ್ಯಕಾರಿ ಸಮಿತಿಯ ೨೧೧ನೇ (ವಿಶೇಷ) ಸಭೆಯ ನಡೆವಳಿಗಳ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು. (ಅನುಬಂಧ-೦೩)

**ನಿರ್ಣಯ** : ದಿನಾಂಕ ೧೧.೦೪.೨೦೨೨ರಂದು ನಡೆದ ಕಾರ್ಯಕಾರಿ ಸಮಿತಿ ೨೧೧ನೇ (ವಿಶೇಷ) ಸಭೆಯ ನಡೆವಳಿಗಳನ್ನು ಪರಿಶೀಲಿಸಿ ಸಭೆಯು ಅನುಮೋದನೆ ನೀಡಿತು.

ವಿಷಯ : ದಿನಾಂಕ ೧೧.೦೪.೨೦೨೨ರಂದು ನಡೆದ ಕಾರ್ಯಕಾರಿ ಸಮಿತಿಯ ೨೧೧ನೇ (ವಿಶೇಷ) ಸಭೆಯ ನಡವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡುವ ಕುರಿತು. (ಅನುಬಂಧ-೦೪)

ನಿರ್ಣಯ : ದಿನಾಂಕ ೧೧.೦೪.೨೦೨೨ರಂದು ನಡೆದ ಕಾರ್ಯಕಾರಿ ಸಮಿತಿಯ ೨೧೧ನೇ (ವಿಶೇಷ) ಸಭೆಯ ನಡವಳಿಗಳ ಅನುಪಾಲನಾ ವರದಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೧೨.೦೧ ಕನ್ನಡ ವಿಶ್ವವಿದ್ಯಾಲಯದಲ್ಲಿ ತಾತ್ಕಾಲಿಕ ಹಾಗೂ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸೇವೆಯನ್ನು ನಿರಂತರವಾಗಿ ಪಡೆಯಲು ಸರ್ಕಾರದ ಅನುಮೋದನೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವವನ್ನು ಸಿದ್ಧಪಡಿಸಿ ಸಲ್ಲಿಸಲು ಅನುಮೋದನೆ ನೀಡಿತು.

೨೧೨.೦೨ ಕನ್ನಡ ವಿಶ್ವವಿದ್ಯಾಲಯದಲ್ಲಿ ತಾತ್ಕಾಲಿಕ ಸೇವೆ ಸಲ್ಲಿಸುತ್ತಿರುವ ವಿಶ್ವವಿದ್ಯಾಲಯಕ್ಕಾಗಿ ಜಮೀನು ಬಿಟ್ಟುಕೊಟ್ಟಿರುವ ರೈತ ಕುಟುಂಬದ ೧೨ ಮಂದಿ ಸದಸ್ಯರ ಸೇವೆಯನ್ನು ಖಾಯಂಗೊಳಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಕನ್ನಡ ವಿಶ್ವವಿದ್ಯಾಲಯವು ಜಮೀನು ಸ್ವಾಧೀನ ಮಾಡಿಕೊಂಡ ರೈತ ಕುಟುಂಬದವರು ೧೨ ಜನ ತಾತ್ಕಾಲಿಕ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳ ಸೇವೆಯನ್ನು ಖಾಯಂಗೊಳಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಭೆಯು ಅನುಮೋದನೆ ನೀಡಿತು.

೨೧೨.೦೩ ಕನ್ನಡ ವಿಶ್ವವಿದ್ಯಾಲಯದಲ್ಲಿ ಗಾಂಧಿ ಅಧ್ಯಯನ ಕೇಂದ್ರವನ್ನು ಆರಂಭಿಸುವ ಕುರಿತು.

ಟಿಪ್ಪಣಿ : ಗಾಂಧಿ ಅಧ್ಯಯನ ಕೇಂದ್ರವನ್ನು ಆರಂಭಿಸುವಂತೆ ಸರ್ಕಾರವು ಈಗಾಗಲೇ ಕನ್ನಡ ವಿಶ್ವವಿದ್ಯಾಲಯಕ್ಕೆ ಆದೇಶಿಸಿದ್ದು, ಅದರಂತೆ ಕ್ರಮವಹಿಸುವ ಕುರಿತು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿ ಮಂಡಿಸಲಾಗಿದೆ.

ನಿರ್ಣಯ : ಸದರಿ ಅಂಶವನ್ನು ಕಾರ್ಯಕಾರಿ ಸಮಿತಿ ಸಭೆಯು ಪರಿಶೀಲಿಸಿ, ನಿಯಮಾನುಸಾರ ಮತ್ತು ಸರ್ಕಾರದ ಆದೇಶಾನುಸಾರ ಗಾಂಧಿ ಅಧ್ಯಯನ ಕೇಂದ್ರವನ್ನು ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರಾರಂಭಿಸಲು ಅನುಮೋದನೆ ನೀಡಿತು.

೨೧೨.೦೪ ಕನ್ನಡ ವಿಶ್ವವಿದ್ಯಾಲಯದಲ್ಲಿ ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅಧ್ಯಯನ ಕೇಂದ್ರವನ್ನು ಸ್ಥಾಪಿಸುವ ಕುರಿತು.

ಟಿಪ್ಪಣಿ : ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅವರ ಆಸಕ್ತೀಯ ಕ್ಷೇತ್ರಗಳಾದ ಸಮಾಜ ವಿಜ್ಞಾನಗಳಲ್ಲಿ ಅಧ್ಯಯನ ಮತ್ತು ಸಂಶೋಧನೆ ಮಾಡುವ ಅವಕಾಶಗಳಿರುವ ಹಿನ್ನೆಲೆಯಲ್ಲಿ, ಆರಂಭದ ಹಂತದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಗನುಸಾರ M.A in Human Development and Management ಕೋರ್ಸ್‌ನ್ನು ಆರಂಭಿಸಿ ಇದರ ಮೂಲಕ ಸಮಾಜಶಾಸ್ತ್ರ, ರಾಜ್ಯಶಾಸ್ತ್ರ, ಕಾನೂನು ಹಾಗೂ ಅರ್ಥಶಾಸ್ತ್ರ ಹಾಗೂ ಅಭಿವೃದ್ಧಿ ಅಧ್ಯಯನ ಸಹಿತ ಬಹುಶಿಸ್ತೀಯ ಅಧ್ಯಯನಕ್ಕೆ ಅವಕಾಶ ಕಲ್ಪಿಸುವ ಬಗ್ಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿ ಮಂಡಿಸಲಾಗಿದೆ.

ನಿರ್ಣಯ : ಸದರಿ ಅಂಶವನ್ನು ಕಾರ್ಯಕಾರಿ ಸಮಿತಿ ಸಭೆಯು ಪರಿಶೀಲಿಸಿ, ನಿಯಮಾನುಸಾರ ವಿಶ್ವವಿದ್ಯಾಲಯದಲ್ಲಿ ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅಧ್ಯಯನ ಕೇಂದ್ರವನ್ನು ಸ್ಥಾಪಿಸಲು ಅನುಮೋದನೆ ನೀಡಿತು.

೨೧೨.೦೫ ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಪಿ. ಪ್ರಕಾಶ್ ಸಂಶೋಧನಾ ಕೇಂದ್ರವನ್ನು ಆರಂಭಿಸುವ ಕುರಿತು.

ಟಿಪ್ಪಣಿ : ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳು ದಿನಾಂಕ ೧೬.೪.೨೦೨೨ರಂದು ತಮ್ಮ ಭಾಷಣದಲ್ಲಿ ಘೋಷಿಸಿದಂತೆ ದಿವಂಗತ ಶ್ರೀಯುತ ಎಂ.ಪಿ.ಪ್ರಕಾಶ್‌ರವರ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲು ಕನ್ನಡ ವಿಶ್ವವಿದ್ಯಾಲಯವು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುವ ಕುರಿತು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿ ಮಂಡಿಸಲಾಗಿದೆ.

ನಿರ್ಣಯ : ಸದರಿ ಅಂಶವನ್ನು ಕಾರ್ಯಕಾರಿ ಸಮಿತಿ ಸಭೆಯು ಪರಿಶೀಲಿಸಿ, ನಿಯಮಾನುಸಾರ ದಿವಂಗತ ಶ್ರೀಯುತ ಎಂ.ಪಿ. ಪ್ರಕಾಶ್ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲು ಅನುಮೋದನೆ ನೀಡಿತು.

೨೧೨.೦೬ ಕನ್ನಡ ವಿಶ್ವವಿದ್ಯಾಲಯದಲ್ಲಿ ವಿಜ್ಞಾನ ಕೇಂದ್ರವನ್ನು ಸ್ಥಾಪಿಸಿ, ಪ್ಲಾನಿಟೋರಿಯಂ ಹಾಗೂ ವಿಜ್ಞಾನ ಪಾರ್ಕ್ ಸ್ಥಾಪಿಸುವ ಕುರಿತು.

ಟಿಪ್ಪಣಿ : ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಸಚಿವರು ತಮ್ಮ ಭಾಷಣದಲ್ಲಿ ಘೋಷಿಸಿದಂತೆ ಕನ್ನಡ ವಿಶ್ವವಿದ್ಯಾಲಯಕ್ಕೆ ಪ್ಲಾನಿಟೋರಿಯಂ ಹಾಗೂ ವಿಜ್ಞಾನ ಪಾರ್ಕ್ ಸ್ಥಾಪನೆಗೆ ಅಗತ್ಯ ನೆರವು ನೀಡುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿ ಮಂಡಿಸಲಾಗಿದೆ.

ನಿರ್ಣಯ : ಸದರಿ ವಿಷಯವನ್ನು ಕಾರ್ಯಕಾರಿ ಸಮಿತಿ ಸಭೆಯು ಪರಿಶೀಲಿಸಿ, ಅನುಮೋದನೆ ನೀಡಿತು.

೨೧೨.೦೭ ಸಹಕಾರಿ ಕ್ಷೇತ್ರದ ಸಂಘ ಹಾಗೂ ಬ್ಯಾಂಕ್‌ಗಳ ಪರೀಕ್ಷೆಗಳನ್ನು ನಡೆಸುವ ಕುರಿತು.

ಟಿಪ್ಪಣಿ : ವಿವಿಧ ಬಗೆಯ ಕೋರ್ಸ್‌ಗಳ (ಪದವಿ, ಸ್ನಾತಕೋತ್ತರ ಪದವಿ, ಡಿಪ್ಲೊಮಾ) ಹಾಗೂ ಸರ್ಕಾರಿ/ಅರೆ ಸರ್ಕಾರಿ/ಸಹಕಾರಿ ಸಂಘಗಳ/ ಬ್ಯಾಂಕ್ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸುತ್ತಾ ಬಂದಿದೆ. ಅಗತ್ಯ ಮೂಲಭೂತ ಸೌಕರ್ಯಗಳು ಹಾಗೂ ಭದ್ರತೆ ದೃಷ್ಟಿಯಿಂದ ಕನ್ನಡ ವಿಶ್ವವಿದ್ಯಾಲಯವು ೧೯೯೧ರ ಪ್ರಾರಂಭದಿಂದಲೂ ಪರೀಕ್ಷೆಗಳನ್ನು ನಡೆಸುತ್ತಿದ್ದು, ಅದನ್ನು ಮುಂದುವರೆಸಿಕೊಂಡು ಹೋಗಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿ ಮಂಡಿಸಲಾಗಿದೆ.

ನಿರ್ಣಯ : ಸದರಿ ವಿಷಯವನ್ನು ಕಾರ್ಯಕಾರಿ ಸಮಿತಿ ಸಭೆಯು ಪರಿಶೀಲಿಸಿ, ಸಹಕಾರಿ ಕ್ಷೇತ್ರದ ಸಂಘ ಹಾಗೂ ಬ್ಯಾಂಕ್‌ಗಳ ಪರೀಕ್ಷೆಗಳನ್ನು ಈ ಹಿಂದಿನಂತೆ ಮುಂದುವರೆಸಿಕೊಂಡು ಹೋಗಲು ಅನುಮೋದನೆ ನೀಡಿತು.

೨೧೨.೦೮ ಪದ್ಮಶ್ರೀ ಮಾತಾ ಬಿ. ಮಂಜಮ್ಮ ಜೋಗತಿ ಪ್ರತಿಷ್ಠಾನಕ್ಕಾಗಿ ಕನ್ನಡ ವಿಶ್ವವಿದ್ಯಾಲಯದ ಒಡೆತನದಲ್ಲಿರುವ ೨.೦೦ ಎಕರೆ ಜಮೀನು ಬಿಟ್ಟುಕೊಡಲು ವಿಶ್ವವಿದ್ಯಾಲಯದ ಸ್ಪಷ್ಟ ಅಭಿಪ್ರಾಯ ಕೋರಿ ಹೊಸಪೇಟೆ ತಾಲೂಕು ತಹಶೀಲ್ದಾರ್‌ರವರು ದಿನಾಂಕ ೦೬.೦೩.೨೦೨೨ರಂದು ಬರೆದ ಪತ್ರದ ಕುರಿತು.

ಟಿಪ್ಪಣಿ : ಹೊಸಪೇಟೆ ತಾಲೂಕು ತಹಶೀಲ್ದಾರರು ಪದ್ಮಶ್ರೀ ಮಾತಾ ಬಿ. ಮಂಜಮ್ಮ ಜೋಗತಿ ಪ್ರತಿಷ್ಠಾನಕ್ಕೆ ಕನ್ನಡ ವಿಶ್ವವಿದ್ಯಾಲಯದ ಸ್ವಾಧೀನದಲ್ಲಿರುವ ಜಮೀನನ್ನು ಬಿಟ್ಟುಕೊಡಲು ಸ್ಪಷ್ಟ ಅಭಿಪ್ರಾಯ ಕೋರಿ ಬರೆದ ಪತ್ರದ ಕುರಿತು ಚರ್ಚಿಸಲು ಕಾರ್ಯಕಾರಿ ಸಮಿತಿ ಸಭೆಗೆ ಮಂಡಿಸಲಾಗಿದೆ.

ನಿರ್ಣಯ : ಪ್ರಸ್ತುತ ವಿಷಯವನ್ನು ಪರಿಶೀಲಿಸಿದ ಕಾರ್ಯಕಾರಿ ಸಮಿತಿ ಸಭೆಯು ಸದರಿ ಪ್ರತಿಷ್ಠಾನಕ್ಕೆ ವಿಶ್ವವಿದ್ಯಾಲಯದ ಅಧೀನದಲ್ಲಿರುವ ಜಮೀನನ್ನು ಬಿಟ್ಟುಕೊಡಲು (ತಾಂತ್ರಿಕ ತೊಡಕುಗಳಿಂದ) ಸಾಧ್ಯವಾಗದು ಎಂದು ತಹಶೀಲ್ದಾರರಿಗೆ ಪತ್ರ ಬರೆದು ತಿಳಿಸಲು ತೀರ್ಮಾನಿಸಿತು.

೨೧೨.೦೯ MOOC (Massive online courses) ಆನ್‌ಲೈನ್ ತರಗತಿಗಳನ್ನು ನಡೆಸಲು ಸಮುದಾಯ ಬಾನುಲಿ ಕೇಂದ್ರದ ಸ್ಟುಡಿಯೋ ನಿರ್ಮಿಸುವ ಕುರಿತು.

ಟಿಪ್ಪಣಿ : ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಅನುದಾನವನ್ನು ಪಡೆದು ನಿಯಮಾನುಸಾರ ಬಾನುಲಿ ಕೇಂದ್ರದ ಸ್ಟುಡಿಯೋ ನಿರ್ಮಿಸಲು ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿ ಮಂಡಿಸಲಾಗಿದೆ.

ನಿರ್ಣಯ : ಈ ವಿಷಯವನ್ನು ಕಾರ್ಯಕಾರಿ ಸಮಿತಿ ಸಭೆಯು ಪರಿಶೀಲಿಸಿ, ನಿಯಮಾನುಸಾರ ಬಾನುಲಿ ಕೇಂದ್ರದ ಸ್ಟುಡಿಯೋ ನಿರ್ಮಿಸಲು ಅನುಮೋದನೆ ನೀಡಿತು.

೨೧೨.೧೦ ಕರ್ನಾಟಕ ಸರ್ಕಾರದ ನಿರ್ದೇಶನದಂತೆ ಕನ್ನಡ ವಿಶ್ವವಿದ್ಯಾಲಯದ ಆವರಣದಲ್ಲಿ ವೈಫೈ, ಸಿ.ಸಿ.ಟಿವಿ ಸೌಲಭ್ಯ, ವೈಫೈ ಇಂಟರ್‌ನೆಟ್ ಸೌಲಭ್ಯ ಹಾಗೂ ಎಲ್‌ಇಡಿ ವಿದ್ಯುತ್ ದೀಪಗಳನ್ನು ಅಳವಡಿಸುವ ಕುರಿತು.

ಟಿಪ್ಪಣಿ : ಕರ್ನಾಟಕ ಸರ್ಕಾರದ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯಿಂದ ಅನುದಾನವನ್ನು ಪಡೆದು, ಕರ್ನಾಟಕ ಸರ್ಕಾರದ ನಿರ್ದೇಶನದಂತೆ ಕನ್ನಡ ವಿಶ್ವವಿದ್ಯಾಲಯದ ಆವರಣದಲ್ಲಿ ವೈಫೈ, ಸಿ.ಸಿ.ಟಿವಿ ಸೌಲಭ್ಯ, ವೈಫೈ ಇಂಟರ್‌ನೆಟ್ ಸೌಲಭ್ಯ ಹಾಗೂ ಎಲ್‌ಇಡಿ ವಿದ್ಯುತ್ ದೀಪಗಳನ್ನು ಅಳವಡಿಸಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸರ್ಕಾರದ ನಿರ್ದೇಶನದಂತೆ ವಿಶ್ವವಿದ್ಯಾಲಯದ ಆವರಣದಲ್ಲಿ ವೈಫೈ, ಸಿ.ಸಿ.ಟಿವಿ ಸೌಲಭ್ಯ, ವೈಫೈ ಇಂಟರ್‌ನೆಟ್ ಸೌಲಭ್ಯ ಹಾಗೂ ಎಲ್‌ಇಡಿ ವಿದ್ಯುತ್ ದೀಪಗಳ ಅಳವಡಿಕೆ ಕಾರ್ಯವನ್ನು ನಿಯಮಾನುಸಾರ ಕೈಗೊಳ್ಳಲು ಕಾರ್ಯಕಾರಿ ಸಮಿತಿ ಸಭೆ ಅನುಮೋದನೆ ನೀಡಿತು.

೨೧೨.೧೧ ಡಾ. ಎಂ. ಮಲ್ಲಿಕಾರ್ಜುನಗೌಡ, ಸಹ ಪ್ರಾಧ್ಯಾಪಕರು ಇವರು ದಿನಾಂಕ ೧೪.೦೩.೨೦೨೨ರಂದು ಮಾನ್ಯ ಕುಲಪತಿಗಳನ್ನು ಭೇಟಿ ಮಾಡಿ ಖುದ್ದಾಗಿ ಸಲ್ಲಿಸಿರುವ ತಪ್ಪೊಪ್ಪಿಗೆ ಪತ್ರದ ಕುರಿತು.

ಟಿಪ್ಪಣಿ : ದಿನಾಂಕ ೧೪.೦೩.೨೦೨೨ರಂದು ಮಾನ್ಯ ಕುಲಪತಿಗಳನ್ನು ಡಾ. ಎಂ. ಮಲ್ಲಿಕಾರ್ಜುನಗೌಡ ಇವರು ಖುದ್ದಾಗಿ ಭೇಟಿ ಮಾಡಿ ತಪ್ಪೊಪ್ಪಿಗೆ ಪತ್ರ ಸಲ್ಲಿಸಿದ್ದು, ಅದಲ್ಲದೆ ವಿಶ್ವವಿದ್ಯಾಲಯದ ವಿರುದ್ಧ ಹೂಡಿದ್ದ ರಿಟ್ ಅರ್ಜಿ ಮತ್ತು ನ್ಯಾಯಾಂಗ ನಿಂದನೆ ಅರ್ಜಿಗಳನ್ನು, ಮಾನ್ಯ ಕುಲಪತಿಗಳ ಮೇಲೆ ಮಾಡಿದ್ದ ಆರೋಪಗಳ ಪತ್ರಗಳನ್ನು ಹಾಗೂ ತತ್ಸಂಬಂಧ ಮಾಧ್ಯಮ ಮತ್ತಿತರೆಡೆಗಳಲ್ಲಿ ಆರೋಪಿಸಿದ್ದ ಹೇಳಿಕೆಗಳನ್ನು ಪೂರ್ಣ ಪ್ರಮಾಣದಲ್ಲಿ ಹಿಂಪಡೆದಿದ್ದಾರೆ. ಕನ್ನಡ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಯವರ ಮೇಲೆ ಸುಳ್ಳು ಆರೋಪ ಮಾಡಿದ್ದಾಗಿ ಒಪ್ಪಿಕೊಂಡು, ಆ ಕೆಲವು ಪತ್ರಗಳನ್ನು ಬರೆದದ್ದು ಮತ್ತು ಅದರ ನಂತರದ ಎಲ್ಲ ಬೆಳವಣಿಗೆಗೆ ಸ್ವತಃ ತಾವೇ ಕಾರಣವೆಂದು ಕ್ಷಮೆ ಯಾಚಿಸಿದ್ದಾರೆ. ಮುಂದುವರೆದು, ವಿಶ್ವವಿದ್ಯಾಲಯದ ಆದೇಶವನ್ನು ಗೌರವಿಸಿ ಕೂಡಲಸಂಗಮದ ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರದಲ್ಲಿ ಹಾಜರಾಗಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸದರಿಯವರ ಮಾರ್ಚ್ ೨೦೨೨ರ ತಿಂಗಳ ವೇತನವನ್ನು ಮುಂದಿನ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಂಡಿಸಿ ಮಾನ್ಯ ನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಟ್ಟು ನಿರ್ಧರಿಸಬಹುದು ಎಂಬ ಮಾನ್ಯ ಕುಲಪತಿಗಳ ಆದೇಶದಂತೆ ವೇತನ ಬಿಡುಗಡೆ ಮಾಡಲಾಗಿದೆ. ಸದರಿ ವಿಷಯವನ್ನು ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿ ಮಂಡಿಸಲಾಗಿದೆ.

ನಿರ್ಣಯ : ಡಾ. ಎಂ. ಮಲ್ಲಿಕಾರ್ಜುನಗೌಡ ಅವರನ್ನು ಕಾರ್ಯಕಾರಿ ಸಮಿತಿಯ ಮುಂದೆ ಕರೆಯಿಸಲಾಗಿ, ಅವರು ಖುದ್ದಾಗಿ ಹಾಜರಾಗಿ ಸ್ವ ಇಚ್ಛೆಯಿಂದ ತಪ್ಪೊಪ್ಪಿಗೆ ಪತ್ರವನ್ನು ಮಾನ್ಯ ಕುಲಪತಿಯವರಿಗೆ ಬರೆದುಕೊಟ್ಟಿರುವುದಾಗಿ ಒಪ್ಪಿಕೊಂಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಅವರ ಬಾಕಿ ವೇತನವನ್ನು ಶಿಕ್ಷೆಯಾಗಿ ಎರಡು ತಿಂಗಳ ಮಟ್ಟಿಗೆ ತಡೆಹಿಡಿದು, ಸಿ.ಸಿ.ಎ.ನಿಯಮಾವಳಿ ಪ್ರಕಾರ ಮುಂದೆ ಈ ರೀತಿ ನಡೆದುಕೊಳ್ಳದಂತೆ ವಾಗ್ದಂಡನೆ ವಿಧಿಸಿ, ಸೇವಾ ಪುಸ್ತಕದಲ್ಲಿ ದಾಖಲಿಸಿ, ನಂತರ ಬಾಕಿ ವೇತನ ಬಿಡುಗಡೆಗೊಳಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

೨೧೨.೧೨ ಕನ್ನಡ ವಿಶ್ವವಿದ್ಯಾಲಯದಲ್ಲಿ ಕಿರಿಯ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿರುವ ೧. ಶ್ರೀ ಕೆ. ಪ್ರಹ್ಲಾದಾಚಾರಿ, ೨. ಶ್ರೀ ಅಜಿತ್ ಹಡಪದ, ೩. ಶ್ರೀ ಜಾಫರ್ ಅಲಿ, ೪. ಶ್ರೀ ಹನುಮೇಶ ಪತ್ತಾರ ಇವರುಗಳು ದಿನಾಂಕ ೧೪.೦೩.೨೦೨೨ ರಂದು ಸಲ್ಲಿಸಿರುವ ಮನವಿ ಪತ್ರದ ಕುರಿತು.

ಟಿಪ್ಪಣಿ : ಕನ್ನಡ ವಿಶ್ವವಿದ್ಯಾಲಯದಲ್ಲಿ ಬೋಧಕೇತರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ೧. ಶ್ರೀ ಕೆ. ಪ್ರಹ್ಲಾದಾಚಾರಿ, ೨. ಶ್ರೀ ಅಜಿತ್ ಹಡಪದ, ೩. ಶ್ರೀ ಜಾಫರ ಅಲಿ, ೪. ಶ್ರೀ ಹನುಮೇಶ ಪತ್ತಾರ ಇವರು ಉಚ್ಚನ್ಯಾಯಾಲಯ ಧಾರವಾಡ ಪೀಠದ ತೀರ್ಪಿನ ದಿನಾಂಕ ೧೪.೦೮.೨೦೧೫ ಮತ್ತು ೩೦.೦೮.೨೦೨೧ರನ್ವಯದಂತೆ ಸೇವಾ ಜೇಷ್ಠತೆಯನ್ನು ನೀಡಬೇಕೆಂದು ಕೋರಿದ್ದಾರೆ. ಸದರಿ ಮನವಿಯಲ್ಲಿ ಈಗಾಗಲೇ ಸೇವೆಯಲ್ಲಿರುವ ಕಿರಿಯ ಸಹಾಯಕರುಗಳ ಹುದ್ದೆಗೆ ಬಡ್ತಿ ನೀಡಿದಲ್ಲಿ ಇವರಿಗಿಂತ ಸೇವಾ ಹಿರಿತನದಲ್ಲಿರುವವರ ಸೇವೆಗೆ ಭಂಗವಾಗದ ರೀತಿಯಲ್ಲಿ ಸೇವಾಜೇಷ್ಠತೆ ನಿಗದಿಪಡಿಸಿ ನ್ಯಾಯದಾನ ಮಾಡಲು ಕೋರಿದ್ದಾರೆ. ಈ ಕುರಿತು ಸೂಕ್ತ ಕ್ರಮ ಕೈಗೊಳ್ಳಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯವನ್ನು ಕಾರ್ಯಕಾರಿ ಸಮಿತಿ ಸಭೆಯು ಪರಿಶೀಲಿಸಿ, ಈ ಕೆಳಗಿನಂತೆ ತೀರ್ಮಾನಗಳನ್ನು ಕೈಗೊಳ್ಳಲು ಅನುಮೋದನೆ ನೀಡಿತು.

೧. ಈಗಾಗಲೇ ಸೇವಾ ಹಿರಿತನದಲ್ಲಿರುವ ಇತರರ ಸೇವೆಗೆ ಧಕ್ಕೆಯಾಗದ ರೀತಿಯಲ್ಲಿ ಸದರಿ ಸಿಬ್ಬಂದಿಗಳ ಸೇವಾ ಜೇಷ್ಠತೆಯನ್ನು ನಿಗದಿಪಡಿಸುವುದು.

೨. ಸೇವಾ ಜೇಷ್ಠತೆ ನಿಗದಿಪಡಿಸಿದ ನಂತರ ಪಾವತಿಸಬೇಕಾದ ಹಿಂಬಾಕಿ ಮೊತ್ತವನ್ನು ಸರ್ಕಾರದ ಅನುದಾನ ಲಭ್ಯತೆ ಆಧರಿಸಿ ಮಂಜೂರು ಮಾಡಲು ಕಾರ್ಯಕಾರಿ ಸಮಿತಿ ಅನುಮೋದನೆ ನೀಡಿತು.

೨೧೨.೧೩ ಕನ್ನಡ ವಿಶ್ವವಿದ್ಯಾಲಯದ ವಿವಿಧ ವಿಸ್ತರಣಾ ಕೇಂದ್ರಗಳನ್ನು ಅಭಿವೃದ್ಧಿಪಡಿಸುವ ಪ್ರಸ್ತಾವನೆಗಳನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ವಿವಿಧ ವಿಸ್ತರಣಾ ಕೇಂದ್ರಗಳನ್ನು ಅಭಿವೃದ್ಧಿಪಡಿಸುವ ಅಂದಾಜು ವೆಚ್ಚದ ಪ್ರಸ್ತಾವಗಳನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಲು ಸಭೆಯು ಅನುಮೋದನೆ ನೀಡಿತು.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು**

೨೧೨.೧೪ ೩೭೧(ಜೆ)ರ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಸ್ಥಳೀಯ ವೃಂದದ ಮೀಸಲಾತಿ ಮತ್ತು ಕನ್ನಡ ವಿಶ್ವವಿದ್ಯಾಲಯದ ದಿ. ೧೧.೧೦.೨೦೧೭ರ ಅಧಿಸೂಚನೆಯನ್ವಯ ರಿಕ್ತ ಬೋಧಕ ಮತ್ತು ಬೋಧಕೇತರ ಹುದ್ದೆಗಳಿಗೆ ೨೦೧೭-೧೮ನೇ ಸಾಲಿನಲ್ಲಿ ನಡೆದ ನೇಮಕಾತಿ ಪ್ರಕ್ರಿಯೆಗಳ ಪರಿಶೀಲನಾ ಸಮಿತಿಯು ದಿನಾಂಕ ೦೪.೦೩.೨೦೨೨ ಮತ್ತು ೧೯.೦೩.೨೦೨೨ರಂದು ಸಭೆಗಳನ್ನು ನಡೆಸಿ ಸಲ್ಲಿಸಿದ ವರದಿ ಕುರಿತು.

ಟಿಪ್ಪಣಿ : i. ಕನ್ನಡ ವಿಶ್ವವಿದ್ಯಾಲಯದಲ್ಲಿ ಭಾರತದ ಸಂವಿಧಾನದ ಅನುಚ್ಛೇದ ೩೭೧(ಜೆ)ರ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಸ್ಥಳೀಯ ವೃಂದದ ಮೀಸಲಾತಿ ಮತ್ತು ಕನ್ನಡ ವಿಶ್ವವಿದ್ಯಾಲಯದ ದಿ.೧೧.೧೦.೨೦೧೭ರ ಅಧಿಸೂಚನೆಯನ್ವಯ ರಿಕ್ತ ಬೋಧಕ ಮತ್ತು ಬೋಧಕೇತರ ಹುದ್ದೆಗಳಿಗೆ ೨೦೧೭-೧೮ನೇ ಸಾಲಿನಲ್ಲಿ ನಡೆದ ನೇಮಕಾತಿ ಪ್ರಕ್ರಿಯೆಗಳ ಪರಿಶೀಲನೆಗೆ ಸಮಿತಿಯನ್ನು ಕಾರ್ಯಕಾರಿ ಸಮಿತಿಯು ರಚಿಸಿದ್ದ ಮೇರೆಗೆ ದಿ.೦೨.೦೩.೨೦೨೨ರಂದು ಅಧಿಸೂಚನೆಯನ್ನು ಹೊರಡಿಸಲಾಗಿದೆ. ಸದರಿ ಸಮಿತಿಯು ದಿ.೦೪.೦೩.೨೦೨೨ ಮತ್ತು ೧೯.೦೩.೨೦೨೨ರಂದು ಎರಡು ಸಭೆಗಳನ್ನು ನಡೆಸಿ ಸಮಿತಿ ಅಧ್ಯಕ್ಷರು ದಿ. ೧೯.೦೩.೨೦೨೨ರಂದು ಮಾನ್ಯ ಕುಲಪತಿಗಳವರಿಗೆ ವರದಿಯನ್ನು ಸಲ್ಲಿಸಿರುತ್ತಾರೆ. ೨೧೦ನೇ ಕಾರ್ಯಕಾರಿ ಸಮಿತಿ ಸಭೆ ನಿರ್ಣಯ(೨೧೦.೨೦)ದಂತೆ ಸದರಿ ಉಪಸಮಿತಿ ಸಲ್ಲಿಸಿದ ವರದಿಯನ್ನು ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿ ಮಂಡಿಸಿದೆ.

ii. ಸರ್ಕಾರವು ಪತ್ರ ಸಂ. ಇಡಿ ೨೦ ಕೆವಿವಿ ೨೦೧೯ ದಿನಾಂಕ ೨೪.೦೩.೨೦೨೨ರಲ್ಲಿ ೩೭೧ (ಜೆ)ರನ್ವಯ ಕಲ್ಯಾಣ ಕರ್ನಾಟಕ ಸ್ಥಳೀಯ ಬೋಧಕ ಮತ್ತು ಬೋಧಕೇತರ ಅಭ್ಯರ್ಥಿಗಳ ನೇಮಕಾತಿ ಕುರಿತು ಪೂರಕ ದಾಖಲೆಗಳೊಂದಿಗೆ ಸ್ಪಷ್ಟೀಕರಣ ನೀಡಲು ಕೋರಿರುತ್ತಾರೆ. ಸರ್ಕಾರವು ಕೋರಿದ ಅಂಶಗಳಿಗೆ ಸ್ಪಷ್ಟೀಕರಣ ನೀಡುವ ಬಗೆಗೆ ಕಾರ್ಯಕಾರಿ ಸಮಿತಿಯ ನಿರ್ದೇಶನ ಕೋರಿದೆ.

ನಿರ್ಣಯ : i. ವರದಿಯನ್ನು ಕಾರ್ಯಕಾರಿ ಸಮಿತಿ ಸಭೆಯು ಕೂಲಂಕಷವಾಗಿ ಪರಿಶೀಲಿಸಿ, ನಿಯಮಾನುಸಾರ ಈ ಕೆಳಗಿನಂತೆ ಕ್ರಮಕೈಗೊಳ್ಳಲು ತೀರ್ಮಾನಿಸಿತು.

೧. ಆರೋಪಗಳುಳ್ಳ ನೌಕರರಿಗೆ ಸಿಸಿಎ ನಿಯಮಾವಳಿಗಳ ಪ್ರಕಾರ ದೋಷಾರೋಪಣೆ ಪಟ್ಟಿ ಜಾರಿಗೊಳಿಸಿ, ರಕ್ಷಣಾ ಹೇಳಿಕೆ ನೀಡಲು ೧೫ ದಿವಸಗಳ ಮುಕ್ತ ಕಾಲಾವಕಾಶ ನೀಡುವುದು.

೨. ಸಮರ್ಪಕ ಉತ್ತರ ನೀಡದಿರುವ ನೌಕರರ ವಿರುದ್ಧ ಸಿ.ಸಿ.ಎ. ನಿಯಮಾವಳಿ ನಿಯಮ ೧೧ರಡಿ ಸರ್ಕಾರದ ಜಾರಿಯಲ್ಲಿರುವ ಆದೇಶಗಳನುಸಾರ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಂದ ಇಲಾಖಾ ವಿಚಾರಣೆ ನಡೆಸಲು ಆದೇಶಿಸಿ, ನಿಯಮಾನುಸಾರ ಮುಂದಿನ ಕ್ರಮಗಳನ್ನು ಜರುಗಿಸುವುದು.

ii. ಸರ್ಕಾರದ ಪತ್ರ ಸಂ. ಇಡಿ ೨೦ ಕೆವಿವಿ ೨೦೧೯, ದಿನಾಂಕ ೨೪.೦೩.೨೦೨೨ರಲ್ಲಿ ಕೋರಿರುವ ಅಂಶಗಳಿಗೆ ಕಂಡಿಕೆವಾರು ಸ್ಪಷ್ಟೀಕರಣದ ಜೊತೆಗೆ ವಿಸ್ತೃತ ವರದಿಯನ್ನು ಸರ್ಕಾರಕ್ಕೆ ಮತ್ತು ಘನತೆವೆತ್ತ ರಾಜ್ಯಪಾಲರಿಗೆ ಸಲ್ಲಿಸಲು ಸಭೆಯು ಅನುಮೋದನೆ ನೀಡಿತು.

೨೧೨.೧೫ ದಿನಾಂಕ ೨೯.೦೪.೨೦೨೨ರಂದು ಸಹಾಯಕ ಗ್ರಂಥಪಾಲಕ ಹುದ್ದೆಯಿಂದ ಉಪಗ್ರಂಥಪಾಲಕ (ಹಂತ ೧೨ ರಿಂದ ೧೩ಎ) ಹುದ್ದೆಗೆ ಸಿ.ಎ.ಎಸ್. ಅಡಿಯಲ್ಲಿ ಮುಂಬಡ್ತಿ ನೀಡುವ ಸಲುವಾಗಿ ನಡೆಸಿದ ಆಯ್ಕೆ ಸಮಿತಿ ಸಭೆಯ ನಡಾವಳಿಗಳಿಗೆ ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ಟಿಪ್ಪಣಿ : ಡಾ. ಎಂ.ಸಿ.ಗುಡಿಮನಿ, ಸಹಾಯಕ ಗ್ರಂಥಪಾಲಕರು ಇವರು ವಿಶ್ವವಿದ್ಯಾಲಯ ಹೊರಡಿಸಿದ ಅಧಿಸೂಚನೆಯಂತೆ ಸಿಎಎಸ್ ಬಡ್ತಿಗಾಗಿ ಅರ್ಜಿ ಸಲ್ಲಿಸಿದ್ದಾರೆ. ಸದರಿಯವರ ಅರ್ಹತೆಗಳನ್ನು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಆಯ್ಕೆ ಸಮಿತಿಯ ಶಿಫಾರಸ್ಸುಗಳಿಗೆ ಅನುಗುಣವಾಗಿ ಯುಜಿಸಿ ನಿಯಾಮವಳಿ ೨೦೧೮ರಲ್ಲಿ ಪರಿಭಾಷಿಸಿದಂತೆ ಸಹಾಯಕ ಗ್ರಂಥಪಾಲಕರು ಶೈಕ್ಷಣಿಕ ಹಂತ ೧೨ರಿಂದ ಉಪಗ್ರಂಥಪಾಲಕರ ಹುದ್ದೆಗೆ ಶೈಕ್ಷಣಿಕ ಹಂತ ೧೩ಎ ಗೆ ಬಡ್ತಿ ನೀಡಲು ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿ ಮಂಡಿಸಲಾಗಿದೆ.

ನಿರ್ಣಯ : ದಿನಾಂಕ ೨೯.೦೪.೨೦೨೨ರಂದು ಸಹಾಯಕ ಗ್ರಂಥಪಾಲಕ ಹುದ್ದೆಯಿಂದ ಉಪಗ್ರಂಥಪಾಲಕ (ಹಂತ ೧೨ ರಿಂದ ೧೩ಎ) ಹುದ್ದೆಗೆ ಸಿ.ಎ.ಎಸ್. ಮುಂಬಡ್ತಿ ನೀಡುವ ಸಲುವಾಗಿ ನಡೆಸಿದ ಆಯ್ಕೆ ಸಮಿತಿ ಸಭೆಯ ನಡೆವಳಿಯನ್ನು ಕಾರ್ಯಕಾರಿ ಸಮಿತಿ ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೧೨.೧೬ ದಿನಾಂಕ ೨೯.೦೪.೨೦೨೨ರಂದು ಸಹ ಪ್ರಾಧ್ಯಾಪಕ ಹುದ್ದೆಯಿಂದ ಪ್ರಾಧ್ಯಾಪಕರ ಹುದ್ದೆ (ಹಂತ ೧೩ಎ ರಿಂದ ೧೪) ಸಿ.ಎ.ಎಸ್. ಅಡಿಯಲ್ಲಿ ಮುಂಬಡ್ತಿ ನೀಡುವ ಸಲುವಾಗಿ ನಡೆಸಿದ ಆಯ್ಕೆ ಸಮಿತಿ ಸಭೆಯ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ಟಿಪ್ಪಣಿ : ಡಾ. ಸುಚೇತ ನವರತ್ನ, ಸಹ ಪ್ರಾಧ್ಯಾಪಕರು, ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ ಇವರು ಸಿಎಎಸ್ ಮುಂಬಡ್ತಿಗಾಗಿ ಸಲ್ಲಿಸಿದ ಶೈಕ್ಷಣಿಕ ಅರ್ಹತೆಯನ್ನು ಪರಿಶೀಲನಾ ಸಮಿತಿಯು ನಿಗದಿತ ಮೌಲ್ಯ ನಿರ್ಧಾರಣಾ ಅವಧಿ ೨೦೧೭-೧೮, ೨೦೧೮-೧೯, ೨೦೧೯-೨೦ರೊಳಗೆ ಪೂರೈಸಿರುವ ಸಂಶೋಧನ ಮತ್ತು ಬೋಧನ ಚಟುವಟಿಕೆಗಳ ಮೌಲ್ಯಮಾಪನ ವಿವರಗಳು ಹಾಗೂ ಅಂಕಗಳನ್ನು ಪರಿಶೀಲಿಸಿ ಅರ್ಹತಾದಾಯಕ ಅಂಕಗಳನ್ನು ಗಳಿಸಿರುವುದಾಗಿ ವರದಿ ನೀಡಿದೆ. ಇದರನ್ವಯ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಆಯ್ಕೆ ಸಮಿತಿ ಶಿಫಾರಸ್ಸಿಗೆ ಅನುಗುಣವಾಗಿ ಯುಜಿಸಿ ನಿಯಾಮವಳಿ ೨೦೧೮ರಲ್ಲಿ ಪರಿಭಾಷಿಸಿದಂತೆ ಸಹ ಪ್ರಾಧ್ಯಪಕರ ಹುದ್ದೆ ಶೈಕ್ಷಣಿಕ ಹಂತ ೧೩ಎ ರಿಂದ ಪ್ರಾಧ್ಯಾಪಕರ ಹುದ್ದೆಗೆ ಶೈಕ್ಷಣಿಕ ಹಂತ ೧೪ಕ್ಕೆ ಬಡ್ತಿ ನೀಡಲು ಕಾರ್ಯಕಾರಿ ಸಮಿತಿಯ ಅನುಮೋದನೆಗಾಗಿ ಮಂಡಿಸಲಾಗಿದೆ.

ನಿರ್ಣಯ : ದಿನಾಂಕ ೨೯.೦೪.೨೦೨೨ರಂದು ಸಹ ಪ್ರಾಧ್ಯಾಪಕ ಹುದ್ದೆಯಿಂದ ಪ್ರಾಧ್ಯಾಪಕರ ಹುದ್ದೆ (ಹಂತ ೧೩ಎ ರಿಂದ ೧೪) ಸಿ.ಎ.ಎಸ್. ಅಡಿಯಲ್ಲಿ ಮುಂಬಡ್ತಿ ನೀಡುವ ಸಲುವಾಗಿ ನಡೆಸಿದ ಆಯ್ಕೆ ಸಮಿತಿ ಸಭೆಯ ನಡೆವಳಿಯನ್ನು ಕಾರ್ಯಕಾರಿ ಸಮಿತಿಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೧೨.೧೭ ಕನ್ನಡ ವಿಶ್ವವಿದ್ಯಾಲಯದಲ್ಲಿ ೩೭೧(ಜೆ)ಅಡಿಯಲ್ಲಿ ಬೋಧಕ ಹುದ್ದೆಗಳ ನೇಮಕಾತಿಗೆ ಸಂಬಂಧ ಸಮಾಜ ಕಲ್ಯಾಣ ಇಲಾಖೆಯ ತನಿಖಾ ವರದಿಯಂತೆ, ೨೦೨೧ರ ಅಧಿಸೂಚನೆ ಹಿಂಪಡೆದು ೨೦೨೨ರಲ್ಲಿ ಹೊಸ ಅಧಿಸೂಚನೆ ಹೊರಡಿಸುವ ಕುರಿತು.

ಟಿಪ್ಪಣಿ : ಕನ್ನಡ ವಿಶ್ವವಿದ್ಯಾಲಯದಲ್ಲಿ ೩೭೧(ಜೆ)ಅಡಿಯಲ್ಲಿ ಬೋಧಕ ಹುದ್ದೆಗಳ ನೇಮಕಾತಿಗೆ ಆಹ್ವಾನಿಸಿದ್ದ ಹುದ್ದೆಗಳ ಮೀಸಲಾತಿ ಸಂಬಂಧದಲ್ಲಿ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯು ೧೯೯೫ರಿಂದ ನಡೆದ ನೇಮಕಾತಿಗಳನ್ನು ಪರಿಶೀಲಿಸಿ ಅಲ್ಲಿಂದ ಮೀಸಲಾತಿಯನ್ನು ನಿಗದಿಪಡಿಸಿ ತನಿಖಾ ವರದಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದೆ. ೨೦೨೧ನೇ ಸಾಲಿನಲ್ಲಿ ಹೊರಡಿಸಿದ್ದ ಕನ್ನಡ ವಿಶ್ವವಿದ್ಯಾಲಯದ ಅಧಿಸೂಚನೆ ಸಂ.ಕವಿಹಂ.ಕುಸ. ೩೭೧(ಜೆ)/ಬೋಧಕ ನೇಮಕಾತಿ:೨೦೨೦-೨೧ ದಿ.೦೩.೦೯.೨೦೨೧ ಹಾಗೂ ತಿದ್ದುಪಡಿ ಅಧಿಸೂಚನೆ ದಿ. ೨೧.೦೯.೨೦೨೧ರ ಅಧಿಸೂಚನೆಗಳನ್ನು ಹಿಂಪಡೆದು, ಪ್ರಸ್ತುತ ತನಿಖಾ ವರದಿಯನ್ವಯ ನಿಗದಿಪಡಿಸಿದ ರೋಸ್ಟರ್ ಬಿಂದುಗಳನ್ನು ಅನುಸರಿಸಿ, ವಿಶ್ವವಿದ್ಯಾಲಯದ ಅಗತ್ಯತೆಗೆ ಅನುಗುಣವಾಗಿ ಹಾಗೂ ಹುದ್ದೆಗಳ ರಿಕ್ತತೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡುಗಳನ್ನು ಮಾಡಿಕೊಂಡು, ಹೊಸ ಅಧಿಸೂಚನೆ ಹೊರಡಿಸಿ ಸರ್ಕಾರದ ನಿರ್ದೇಶನದಂತೆ ಮೊದಲ ಹಂತದಲ್ಲಿ ಸದರಿ ೧೭ ಬೋಧಕ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲು ಹಾಗೂ ಈ ಮಧ್ಯೆ ತೆರವಾದ ೬ ಬೋಧಕ ಹುದ್ದೆಗಳ ಜೊತೆಗೆ ಬೋಧಕೇತರ ರಿಕ್ತ ಹುದ್ದೆಗಳನ್ನು ಒಟ್ಟುಗೂಡಿಸಿ ಸರ್ಕಾರದ ಅನುಮೋದನೆ ಪಡೆದುಕೊಂಡು ಎರಡನೇ ಹಂತದಲ್ಲಿ ಭರ್ತಿ ಮಾಡಿಕೊಳ್ಳಲು ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯವನ್ನು ಕಾರ್ಯಕಾರಿ ಸಮಿತಿ ಸಭೆಯು ಪರಿಶೀಲಿಸಿತು.

೧) ಸಮಾಜ ಕಲ್ಯಾಣ ಇಲಾಖೆಯ ತನಿಖಾ ವರದಿಯನ್ವಯ ರೋಸ್ಟರ್ ಬಿಂದುಗಳನ್ನು ಕಡ್ಡಾಯವಾಗಿ ಪಾಲಿಸಿ, ವಿಶ್ವವಿದ್ಯಾಲಯದ ಅಗತ್ಯತೆಗೆ ಅನುಗುಣವಾಗಿ ರಿಕ್ತ ಹುದ್ದೆಗಳನ್ನು ವಿಭಾಗವಾರು ಹಂಚಿಕೆ ಮಾಡಿಕೊಂಡು, ಹೊಸ ಅಧಿಸೂಚನೆ ಹೊರಡಿಸಿ ಸರ್ಕಾರದ ನಿರ್ದೇಶನದಂತೆ ಮೊದಲ ಹಂತದಲ್ಲಿ ಸದರಿ ೧೭ ಬೋಧಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಸರ್ವಾನುಮತದಿಂದ ಸಭೆಯು ಅನುಮೋದನೆ ನೀಡಿತು.

೨) ಈ ಮಧ್ಯೆ ತೆರವಾದ ೬ ಬೋಧಕ ಹುದ್ದೆಗಳ ಜೊತೆಗೆ ಬೋಧಕೇತರ ರಿಕ್ತ ಹುದ್ದೆಗಳನ್ನು ಒಟ್ಟುಗೂಡಿಸಿ ಸರ್ಕಾರದ ಅನುಮೋದನೆ ಪಡೆದುಕೊಂಡು ಎರಡನೇ ಹಂತದಲ್ಲಿ ಭರ್ತಿ ಮಾಡಿಕೊಳ್ಳಲು ಅನುಮೋದನೆ ನೀಡಿತು.

೨೧೨.೧೮ ಕನ್ನಡ ವಿಶ್ವವಿದ್ಯಾಲಯದಲ್ಲಿ ಮಹಿಳಾ ಮೀಸಲಾತಿ ಅನ್ವಯ ಆಡಳಿತಾತ್ಮಕ ಹಾಗೂ ಶೈಕ್ಷಣಿಕ ಜವಾಬ್ದಾರಿಗಳಲ್ಲಿ ಮಹಿಳೆಯರಿಗೆ ಅವಕಾಶ ಕಲ್ಪಿಸುವ ಕುರಿತು.

ನಿರ್ಣಯ : ಪ್ರಸ್ತುತ ವಿಷಯದ ಕುರಿತು ಕಾರ್ಯಕಾರಿ ಸಮಿತಿ ಸಭೆಯು ಚರ್ಚಿಸಿ, ನಿಯಮಗಳಲ್ಲಿರುವ ಅವಕಾಶಗಳ ಅನುಸಾರ ಕ್ರಮವಹಿಸಲು ಅನುಮೋದನೆ ನೀಡಿತು.

೨೧೨.೧೯ ಮಾರ್ಚ್ ೦೮, ೨೦೨೨ರಂದು ನಡೆದ ಡೀನ್ ಸಮಿತಿ ಸಭೆಯ ನಡೆವಳಿಗಳಿಗೆ ಅನುಮೋದನೆ ನೀಡುವ ಕುರಿತು.

ನಿರ್ಣಯ : ಸದರಿ ನಡೆವಳಿಯನ್ನು ಕಾರ್ಯಕಾರಿ ಸಮಿತಿ ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೧೨.೨೦ ೩೦ನೇ ನುಡಿಹಬ್ಬದ ಖರ್ಚು ವೆಚ್ಚಗಳಿಗೆ ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ೩೦ನೇ ನುಡಿಹಬ್ಬದ/ಘಟಿಕೋತ್ಸವದ ಒಟ್ಟು ಖರ್ಚುವೆಚ್ಚಗಳಿಗೆ ಅನುಮೋದನೆ ನೀಡಿತು.

೨೧೨.೨೧ ಚಿತ್ರಕಲಾ ವಿದ್ಯಾಲಯಗಳ ನಿರ್ವಹಣಾ ಕೇಂದ್ರದ ವ್ಯಾಪ್ತಿಯಲ್ಲಿ ಬರುವ ಚಿತ್ರಕಲಾ ವಿದ್ಯಾಲಯಗಳ ೨೦೨೨-೨೩ನೇ ಶೈಕ್ಷಣಿಕ ಸಾಲಿನ ಕಾರ್ಯಚಟುವಟಿಕೆಗಳ ಅಧಿಸೂಚನೆಗೆ ಕಾರ್ಯಕಾರಿ ಸಮಿತಿಯ ಅನುಮೋದನೆ ನೀಡುವ ಕುರಿತು.

ನಿರ್ಣಯ : ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ, ಈ ಕೆಳಗಿನಂತೆ ಕ್ರಮವಹಿಸಲು ಸೂಚಿಸಿ, ೨೦೨೨-೨೩ನೇ ಶೈಕ್ಷಣಿಕ ಸಾಲಿನ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದ ಅಧಿಸೂಚನೆಗೆ ಅನುಮೋದನೆ ನೀಡಿತು.
ಚಿತ್ರಕಲಾ ವಿದ್ಯಾಲಯಗಳ ಕಾರ್ಯನಿರ್ವಹಣೆ ಕುರಿತು ಸಂಬಂಧಪಟ್ಟ ಸಮಿತಿಯು ಪರಿಶೀಲನೆ ನಡೆಸಿ ಅವುಗಳ ಶೈಕ್ಷಣಿಕ ಗುಣಮಟ್ಟ ಸುಧಾರಣೆಗೆ ಸಂಬಂಧಪಟ್ಟಂತೆ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಸೂಚಿಸಿತು.

೨೧೨.೨೨ ಮಾನ್ಯ ಕುಲಪತಿಗಳ ಬಳಕೆಗಾಗಿ ನಾಲ್ಕು ಚಕ್ರದ ಹೊಸ ವಾಹನವನ್ನು ತಯಾರಕ ಕಂಪನಿಯ ದರದಲ್ಲಿ ಖರೀದಿಸಲು ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ನಿರ್ಣಯ : ಮಾನ್ಯ ಕುಲಪತಿಗಳ ಅಗತ್ಯತೆಗೆ ಅನುಗುಣವಾಗಿ ಹೊಸ ವಾಹನವೊಂದನ್ನು ತಯಾರಕ ಕಂಪನಿಯ ದರದಲ್ಲಿ ಖರೀದಿಸಲು ಕಾರ್ಯಕಾರಿ ಸಮಿತಿ ಸಭೆ ಸರ್ವಾನುಮತದಿಂದ ಅನುಮೋದನೆ ನೀಡಿತು.

೨೧೨.೨೩ ಕನ್ನಡ ವಿಶ್ವವಿದ್ಯಾಲಯದ ಆವರಣದಲ್ಲಿರುವ ಶ್ರೀಶೈಲ ಅತಿಥಿಗೃಹ, ಗಿರಿಸೀಮೆ, ಘಟಿಕಾಲಯ ಹಾಗೂ ಶಿಲ್ಪವನಗಳ ನವೀಕರಣ ಕಾರ್ಯವನ್ನು ಸರ್ಕಾರದ ಅನುದಾನವನ್ನು ಪಡೆದು ನಿಯಮಾನುಸಾರ ಕೈಗೊಳ್ಳಲು ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯಗಳನ್ನು ಕಾರ್ಯಕಾರಿ ಸಮಿತಿ ಸಭೆಯು ಪರಿಶೀಲಿಸಿ, ಶ್ರೀಶೈಲ ಅತಿಥಿಗೃಹ, ಗಿರಿಸೀಮೆ, ಘಟಿಕಾಲಯ ಹಾಗೂ ಶಿಲ್ಪವನಗಳ ನವೀಕರಣ ಕಾರ್ಯವನ್ನು ನಿಯಮಾನುಸಾರ ಕೈಗೊಳ್ಳಲು ಅನುಮೋದನೆ ನೀಡಿತು.

೨೧೨.೨೪ ದಿನಾಂಕ ೧೮.೦೪.೨೦೨೨ರಂದು ಶ್ರೀಯುತ ಎ.ಕೆ.ದೊಡ್ಡಬಸಪ್ಪ, ಸಂಶೋಧನಾ ವಿದ್ಯಾರ್ಥಿ, ಅಭಿವೃದ್ಧಿ ಅಧ್ಯಯನ ವಿಭಾಗ ಇವರಿಗೆ ನೀಡಿರುವ ನೋಟಿಸ್ ಮತ್ತು ಅದಕ್ಕೆ ಅವರು ನೀಡಿದ ವಿವರಣೆ ಕುರಿತು.

ನಿರ್ಣಯ : ಈ ವಿಷಯವನ್ನು ಕಾರ್ಯಕಾರಿ ಸಮಿತಿ ಸಭೆಯು ಸುದೀರ್ಘವಾಗಿ ಚರ್ಚಿಸಿ, ಈ ಕೆಳಗಿನಂತೆ ಕ್ರಮಕೈಗೊಳ್ಳಲು ತೀರ್ಮಾನಿಸಿತು.

೧. ಶ್ರೀಯುತ ಎ.ಕೆ.ದೊಡ್ಡಬಸಪ್ಪ, ಸಂಶೋಧನಾ ವಿದ್ಯಾರ್ಥಿ, ಅಭಿವೃದ್ಧಿ ಅಧ್ಯಯನ ವಿಭಾಗ ಇವರ ವಿರುದ್ಧ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಹೂಡುವುದರ ಜೊತೆಗೆ ಎಲ್ಲ ಬಗೆಯ ಕಠಿಣ ಕಾನೂನು ಮತ್ತು ಆಡಳಿತಾತ್ಮಕ ಕ್ರಮಗಳನ್ನು ಕೂಡಲೇ ಜರುಗಿಸಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

೨. ಸದರಿ ವಿದ್ಯಾರ್ಥಿಯು ಅಶಿಸ್ತಿನಿಂದ ವರ್ತಿಸಿ ವಿಶ್ವವಿದ್ಯಾಲಯದ ದೈನಂದಿನ ಆಡಳಿತಕ್ಕೆ ಅನಗತ್ಯ ತೊಂದರೆ ಉಂಟು ಮಾಡುತ್ತಿರುವ ಹಾಗೂ ಶೈಕ್ಷಣಿಕ ವಾತಾವರಣವನ್ನು ಕಲುಷಿತಗೊಳಿಸುತ್ತಿರುವ ಹಿನ್ನೆಲೆಯಲ್ಲಿ ಇವರನ್ನು ಒಳಗೊಂಡಂತೆ ಅನಧಿಕೃತವಾಗಿ ವಿದ್ಯಾರ್ಥಿನಿಲಯಗಳಲ್ಲಿ ವಾಸಿಸುವವರನ್ನು ತೆರವುಗೊಳಿಸಲು ಸೂಕ್ತ ಕಠಿಣ ಕ್ರಮಗಳನ್ನು ಜರುಗಿಸಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

೨೧೨.೨೫ ೨೦೨೧-೨೨ನೇ ಸಾಲಿನಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವದ್ಧಿ ಮಂಡಳಿಯ ಮಾನ್ಯ ಮುಖ್ಯಮಂತ್ರಿಗಳ ವಿವೇಚನಾ ನಿಧಿಯಡಿ ರೂ. ೨೦.೦೦ ಕೋಟಿಗಳ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ನೀಡುವ ಕುರಿತು.

ಟಿಪ್ಪಣಿ : ಕನ್ನಡ ವಿಶ್ವವಿದ್ಯಾಲಯಕ್ಕೆ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ಘೋಷಿಸಿದಂತೆ ಕಲ್ಯಾಣ ಕರ್ನಾಟಕ ಪ್ರದೇಶಾಭಿವದ್ಧಿ ಮಂಡಳಿಯಿಂದ ಮಾನ್ಯ ಮುಖ್ಯಮಂತ್ರಿಗಳ ವಿವೇಚನಾ ಕೋಟಾದಡಿಯಲ್ಲಿ ರೂ. ೨೦.೦೦ ಕೋಟಿಗಳನ್ನು ಬಿಡುಗಡೆ ಮಾಡುವ ಪ್ರಸ್ತಾವನೆಗೆ ಮಾನ್ಯ ಮುಖ್ಯಮಂತ್ರಿಗಳು ಸರ್ಕಾರದ ಆದೇಶ ಸಂಖ್ಯೆ: ಪಿಡಿಎಸ್ ೭೮ ಹೆಚ್‌ಕೆಡಿ ೨೦೨೨, ಬೆಂಗಳೂರು ದಿನಾಂಕ ೦೫.೦೫.೨೦೨೨ರ ಮೂಲಕ ವಿವಿಧ ಕಾಮಗಾರಿಗಳಿಗೆ ಸಂಬಂಧಪಟ್ಟ ಕ್ರಿಯಾ ಯೋಜನೆಯನ್ನು ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸುವಂತೆ ಸದರಿ ಆದೇಶ ಹೊರಡಿಸಿರುತ್ತಾರೆ.

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಪತ್ರ ಸಂಖ್ಯೆ: ಕಕಪ್ರಮಂ/ಯೋಶಾ/ವಿ.ನಿ/ಸಿ.ಎಂ.ಡಿ.ಕ್ಯೂ/೦೧/ ೨೦೨೧-೨೨/ ೯೪೮, ದಿನಾಂಕ ೦೬.೦೫.೨೦೨೨ರನ್ವಯ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಸಲ್ಲಿಸಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಪತ್ರ ದಿನಾಂಕ ೦೬.೦೫.೨೦೨೨ರ ಅನ್ವಯ ಮಾನ್ಯ ಮುಖ್ಯಮಂತ್ರಿಗಳ ವಿವೇಚನಾ ಕೋಟಾ(CMDQ)ಗೆ ಮೀಸಲಿಟ್ಟ ರೂ. ೨೯೮೫.೯೫ ಲಕ್ಷಗಳ ಅನುದಾನದಲ್ಲಿ ರೂ. ೨೦೦೦.೦೦ ಲಕ್ಷಗಳನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿವಿಧ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಸರ್ಕಾರವು ಅನುಮೋದನೆ ನೀಡಿ ಆದೇಶಿಸಿದೆ. ಕಾರ್ಯದರ್ಶಿಗಳು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯು ವಿಧಿಸಿರುವ ಷರತ್ತುಗಳನ್ವಯ ನಿಯಮಾನುಸಾರ ಸಂಬಂಧಪಟ್ಟ ಕಾಮಗಾರಿಗಳನ್ನು ಕೈಗೊಳ್ಳಲು ಸಭೆಯು ಅನುಮೋದನೆ ನೀಡಿತು.

೨೧೨.೨೬ ಕನ್ನಡ ವಿಶ್ವವಿದ್ಯಾಲಯದ ವಿಸ್ತರಣಾ ಕೇಂದ್ರಗಳಿಗೆ ಸಿಸಿ ಟಿವಿ ಹಾಗೂ ಬಯೋಮ್ಯಾಟ್ರಿಕ್ ಅಳವಡಿಕೆಯ ಕುರಿತು.

ಟಿಪ್ಪಣಿ : ಕನ್ನಡ ವಿಶ್ವವಿದ್ಯಾಲಯದಲ್ಲಿ ಏಳು ವಿಸ್ತರಣಾ ಕೇಂದ್ರಗಳಿದ್ದು ಬೇರೆ ಬೇರೆ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಸದರಿ ಕೇಂದ್ರಗಳಿಗೆ ಅತ್ಯಾಧುನಿಕವಾದ ಸಿಸಿ ಟಿವಿ ಹಾಗೂ ಬಯೋಮ್ಯಾಟ್ರಿಕ್‌ಗಳನ್ನು ಅಳವಡಿಸಿ ಆನ್‌ಲೈನ್‌ನಲ್ಲಿ ವೀಕ್ಷಿಸಲು ವರದಿ ಪಡೆಯಲು ಅನುಕೂಲವಾಗುವಂತೆ ಅಳವಡಿಸಬೇಕಾಗಿದೆ. ಒಂದು ಕೇಂದ್ರಕ್ಕೆ ಅಂದಾಜು ರೂ. ೭೦,೦೦೦/-ಗಳಾಗಬಹುದು. ಏಳು ವಿಸ್ತರಣಾ ಕೇಂದ್ರಗಳಿಗೆ ಸಿಸಿ ಟಿವಿ ಬಯೋಮ್ಯಾಟ್ರಿಕ್ ಅಳವಡಿಸಲು ಕನಿಷ್ಠ ಒಂದು ತಿಂಗಳ ಕಾಲಾವಕಾಶ ಬೇಕಾಗುತ್ತದೆ. ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ವಿಶ್ವವಿದ್ಯಾಲಯದ ವಿಸ್ತರಣಾ ಕೇಂದ್ರಗಳಿಗೆ ಸಿಸಿ ಟಿವಿ ಹಾಗೂ ಬಯೋಮ್ಯಾಟ್ರಿಕ್ ಉಪಕರಣಗಳನ್ನು ಅಳವಡಿಸಲು ಅನುಮೋದನೆ ನೀಡಿತು. ಮತ್ತು ಬಯೋಮ್ಯಾಟ್ರಿಕ್ ಕಡ್ಡಾಯಗೊಳಿಸಿ, ಇದರ ಮೂಲಕ ದೈನಂದಿನ ಹಾಜರಾತಿಯನ್ನು ನಿರ್ವಹಿಸಲು ಸೂಚಿಸಿತು.

೨೧೨.೨೭ ಡಾ. ಈ. ಯರ‍್ರಿಸ್ವಾಮಿ ಇವರು ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ. ಪದವಿ ಜೊತೆಗೆ ಅದೇ ಅವಧಿಯಲ್ಲಿ ತುಮಕೂರಿನ ರಾಜೀವಗಾಂಧಿ ಕಾಲೇಜ್ ಆಫ್ ಎಜುಕೇಷನ್ ಬಿ.ಎಡ್. ಎರಡೂ ಪದವಿಗಳನ್ನು ಏಕ ಕಾಲದಲ್ಲಿ ಪೂರೈಸಿರುವ ಕುರಿತು.

ಟಿಪ್ಪಣಿ : ೧. ಡಾ. ಈ. ಯರ‍್ರಿಸ್ವಾಮಿ ಇವರು ೨೦೦೭-೧೦ರ ಅವಧಿವರೆಗೆ ಕನ್ನಡ ವಿಶ್ವವಿದ್ಯಾಲಯ, ಹಂಪಿ ಇಲ್ಲಿ ಪಿಎಚ್.ಡಿ. ಪದವಿ ಜೊತೆ ಜೊತೆಗೆ ೨೦೦೭-೦೮ರ ಅದೇ ಅವಧಿಯಲ್ಲಿ ತುಮಕೂರಿನ ರಾಜೀವಗಾಂಧಿ ಕಾಲೇಜ್ ಆಫ್ ಎಜುಕೇಷನ್, ತುಮಕೂರು ಇಲ್ಲಿ ಬಿ.ಎಡ್. ಪದವಿಯನ್ನು ಪೂರೈಸುವ ಮೂಲಕ ಎರಡೂ ಕಡೆ ಭೌತಿಕವಾಗಿ ಹಾಜರಿದ್ದುದಾಗಿ ಎರಡೂ

ಸಂಸ್ಥೆಗಳಿಗೆ ವಂಚಿಸಿರುವುದು ಹಾಗೂ ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಭೌತಿಕ ಹಾಜರಾತಿ ಇದ್ದುದಾಗಿ ವಿದ್ಯಾರ್ಥಿ ಆರ್ಥಿಕ ನೆರವು ಪಡೆದುಕೊಂಡಿರುವುದು ೨೧೦ನೇ ಕಾರ್ಯಕಾರಿ ಸಮಿತಿಯು ರಚಿಸಿದ್ದ ೨೦೧೭-೧೮ನೇ ಸಾಲಿನ "ನೇಮಕಾತಿ ಪ್ರಕ್ರಿಯೆಗಳ ಪರಿಶೀಲನಾ ಸಮಿತಿ" ವರದಿಯಿಂದ ಸಾಬೀತಾಗಿರುತ್ತದೆ.

ಸದರಿಯವರ ನೇಮಕಾತಿಯಿಂದ ಬಾಧಿತರಾದವರು ಆಕ್ಷೇಪಣಾ ಅರ್ಜಿಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದು, ಅರ್ಹ ಅಭ್ಯರ್ಥಿಗೆ ನ್ಯಾಯ ದೊರಕಿಸಿಕೊಡಲು ವಿನಂತಿಸುತ್ತಾ, ಒಂದು ಕಡೆ ನಕಲಿ ಅಂಕಪಟ್ಟಿಯ ಜಾಲ ವ್ಯಾಪಕವಾಗಿ ಚಲಾವಣೆಯಲ್ಲಿರುವುದು ಸ್ಪಷ್ಟವಾಗಿ ತಿಳಿದುಬರುತ್ತದೆ. ಆದ್ದರಿಂದ ನಕಲಿ ಪದವಿ ಪಡೆದುಕೊಂಡ ಅಪರಾಧಿಗಳನ್ನು ಪತ್ತೆ ಹಚ್ಚಿ ಕಾನೂನು ಕ್ರಮ ಜರುಗಿಸುವಂತೆ ಕೋರಿರುತ್ತಾರೆ.

ಈ ದಿಶೆಯಲ್ಲಿ ಡಾ. ಈ. ಯರ್ರಿಸ್ವಾಮಿ ಅವರ ಮೇಲಿನ ವಂಚನೆ ಆರೋಪದ ಕುರಿತು ವ್ಯಾಪ್ತಿ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಹೂಡಲು ಹಾಗೂ ಬಾಧಿತರಿಗೆ ನ್ಯಾಯ ದೊರಕಿಸಿಕೊಡಲು ಅಗತ್ಯವಾದ ಮುಂದಿನ ಎಲ್ಲ ಕ್ರಮಗಳನ್ನು ಜರುಗಿಸಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

೨. ತನ್ನ ವೈಯಕ್ತಿಕ ಹಿತಾಸಕ್ತಿಗಾಗಿ ಇತರೆ ನೌಕರರೊಡನೆ ಸೇರಿ ಮುಷ್ಕರ ಹೂಡಿ ವಿಶ್ವವಿದ್ಯಾಲಯದ ಹಿತಾಸಕ್ತಿಗೆ ಅಪಕೀರ್ತಿ ತಂದ ಬಗ್ಗೆ ಶಿಸ್ತುಕ್ರಮ ಜರುಗಿಸಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ೧. ಸದರಿ ಅಂಶವನ್ನು ಕಾರ್ಯಕಾರಿ ಸಮಿತಿ ಸಭೆಯು ಪರಿಶೀಲಿಸಿ, ಈ ಸಂಬಂಧ ಪೊಲೀಸ್ ಠಾಣೆಯಲ್ಲಿ ವಂಚನೆ ಪ್ರಕರಣ/ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲು ಹಾಗೂ ಸಿಸಿಎ ನಿಯಮಾವಳಿಗಳನ್ವಯ ಇಲಾಖಾ ವಿಚಾರಣೆಯನ್ನು ನಡೆಸಿ ಮುಂದಿನ ಸೂಕ್ತ ಕ್ರಮಗಳನ್ನು ಜರುಗಿಸಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

೨. ಸದರಿ ವಿಷಯವನ್ನು ಕಾರ್ಯಕಾರಿ ಸಮಿತಿ ಸಭೆಯು ಪರಿಶೀಲಿಸಿ ನಿಯಮಾನುಸಾರ ಶಿಸ್ತುಕ್ರಮಗಳನ್ನು ಜರುಗಿಸಲು ಸರ್ವಾನುಮತದಿಂದ ಅನುಮೋದನೆ ನೀಡಿತು.

೨೧೨.೨೮ ಕಾರ್ಯಕಾರಿ ಸಮಿತಿ ಸದಸ್ಯರಿಗೆ ನೀಡಲಾಗುತ್ತಿರುವ ಪ್ರಯಾಣದ (ಕಾರಿನ ಕಿ.ಮೀ.ದರ)ದರ ಹಾಗೂ ಸಭಾ ಭತ್ಯೆ ದರಗಳನ್ನು ಪರಿಷ್ಕರಿಸುವ ಬಗ್ಗೆ.

ನಿರ್ಣಯ : ಈ ಕುರಿತಂತೆ ಕಾರ್ಯಕಾರಿ ಸಮಿತಿ ಸಭೆಯು ಚರ್ಚಿಸಿ, ಕಾರಿನ ಬಾಡಿಗೆಯ ಮಾರುಕಟ್ಟೆ ದರಗಳು ಡೀಸೆಲ್, ಪೆಟ್ರೋಲ್ ಬೆಲೆಗೆ ತಕ್ಕಂತೆ ಏರಿಕೆಯಾಗಿರುವುದರ ದಿನಾಂಕ. ೦೫.೦೫.೨೦೨೨ರಿಂದ ಜಾರಿಗೆ ಬರುವಂತೆ ಕಿ.ಮೀ.ಗೆ ನೀಡಲಾಗುತ್ತಿರುವ ಕಾರು ಪ್ರಯಾಣ ದರ ರೂ.೧೦/- ಬದಲಾಗಿ ರೂ.೧೫/- ಗಳಿಗೆ ಹೆಚ್ಚಿಸಲು ಹಾಗೂ ಸಭಾ ಭತ್ಯೆಯನ್ನು ರೂ. ೨೦೦೦/- ಗಳಿಂದ ರೂ.೫೦೦೦/-ಗಳಿಗೆ ಹೆಚ್ಚಿಸಲು ಸಭೆಯು ಅನುಮೋದನೆ ನೀಡಿತು.

೨೧೨.೨೯ ಕನ್ನಡ ವಿಶ್ವವಿದ್ಯಾಲಯದ ಆವರಣದಲ್ಲಿ ಹಣ್ಣಿನ ಗಿಡಗಳನ್ನು ಬೆಳೆಸುವ ಬಗ್ಗೆ.

ನಿರ್ಣಯ : ತೋಟಗಾರಿಕೆ ವಿಭಾಗದ ಮೂಲಕ ವಿಶ್ವವಿದ್ಯಾಲಯದ ಆವರಣದಲ್ಲಿ ಇನ್ನಷ್ಟು ಹಣ್ಣಿನ ಗಿಡಗಳನ್ನು ಬೆಳೆಸಲು ಮತ್ತು ಪೋಷಣೆ ಸಂಬಂಧ ಅಗತ್ಯವಾದ ಅನುದಾನ ಮತ್ತು ನೀರಿನ ಸೌಲಭ್ಯಗಳನ್ನು ಒದಗಿಸಲು ಸಭೆಯು ಅನುಮೋದನೆ ನೀಡಿತು.

೨೧೨.೩೦ ಮೈಸೂರಿನಲ್ಲಿ ಗಾಂಧಿವಾದಿ ಶ್ರೀ ಟಿ.ಎಸ್.ಸುಬ್ಬಣ್ಣ ಅವರ ಹೆಸರಿನಲ್ಲಿ ಸಂಶೋಧನಾ ಕೇಂದ್ರವನ್ನು ಸ್ಥಾಪಿಸುವ ಕುರಿತು.

ನಿರ್ಣಯ : ಈ ಸಂಬಂಧ ಸಭೆಯು ಪರಿಶೀಲಿಸಿ, ಮೈಸೂರಿನ ಶ್ರೀ ಟಿ.ಎಸ್. ಸುಬ್ಬಣ್ಣ ಸಾರ್ವಜನಿಕ ವಿದ್ಯಾಸಂಸ್ಥೆಯಲ್ಲಿ ಗಾಂಧಿವಾದಿ ಶ್ರೀ ಟಿ.ಎಸ್.ಸುಬ್ಬಣ್ಣ ಅವರ ಹೆಸರಿನಲ್ಲಿ ಕನ್ನಡ ವಿಶ್ವವಿದ್ಯಾಲಯದ ಸಂಶೋಧನಾ ಕೇಂದ್ರ(ವಿಸ್ತರಣಾಕೇಂದ್ರ)ವನ್ನು ನೂತನವಾಗಿ ಪ್ರಾರಂಭಿಸಲು ಅನುಮೋದನೆ ನೀಡಿತು.

೨೧೨.೩೧ ಆಡಳಿತ ಸಿಬ್ಬಂದಿಗಳ ಪದೋನ್ನತಿ ಸಂಬಂಧ ಇಲಾಖೆ ಮುಂಬಡ್ತಿ ಸಮಿತಿ (DPC) ಸಭೆಯನ್ನು ಆಯೋಜಿಸುವ ಬಗ್ಗೆ.

ನಿರ್ಣಯ : ಕನ್ನಡ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಆಡಳಿತ ಸಿಬ್ಬಂದಿಗಳ ಪದೋನ್ನತಿ ಮತ್ತು ಅವಶ್ಯಕತೆಗಳಿಗೆ ಅನುಗುಣವಾದ ಹುದ್ದೆಗಳನ್ನು ಮಾತ್ರ ಮೇಲ್ದರ್ಜೆಗೇರಿಸುವ ಸಂಬಂಧ ಸೂಕ್ತ ಕ್ರಮ ಕೈಗೊಳ್ಳಲು ಇಲಾಖಾ ಮುಂಬಡ್ತಿ ಸಮಿತಿ (DPC) ಸಭೆಯನ್ನು ಮಾನ್ಯ ಕುಲಪತಿಗಳು ನಿರ್ಧರಿಸುವ ದಿನಾಂಕದಂದು ಆಯೋಜಿಸಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

೨೧೨.೩೨ ದೂರಶಿಕ್ಷಣ ನಿರ್ದೇಶನಾಲಯದ ಕೋರ್ಸ್‌ಗಳನ್ನು ಮುಂದುವರೆಸುವ ಬಗ್ಗೆ.

ನಿರ್ಣಯ : ಸದರಿ ವಿಷಯದ ಕುರಿತು ಸಭೆಯು ಚರ್ಚಿಸಿ ದೂರಶಿಕ್ಷಣ ನಿರ್ದೇಶನಾಲಯದ ಮೂಲಕ ನಡೆಸುತ್ತಿರುವ ಸ್ನಾತಕೋತ್ತರ ಪದವಿ ಹಾಗೂ ಡಿಪ್ಲೊಮಾ ಕೋರ್ಸ್‌ಗಳನ್ನು ಮುಂದುವರೆಸುವ ಬಗ್ಗೆ ಯು.ಜಿ.ಸಿ. ಹಾಗೂ ಸರ್ಕಾರದ ಅನುಮೋದನೆ ಪಡೆಯುವ ಸಂಬಂಧ ಸೂಕ್ತ ಕ್ರಮವಹಿಸಲು ನಿರ್ಣಯಿಸಿತು.

೨೧೨.೩೩ ಕನ್ನಡ ವಿಶ್ವವಿದ್ಯಾಲಯದ ಸಂಗೀತ ಮತ್ತು ನೃತ್ಯ ವಿಭಾಗಕ್ಕೆ ಬಾಹ್ಯ ಮಾರ್ಗದರ್ಶಕರನ್ನು ನಿಯೋಜಿಸಿಕೊಳ್ಳುವ ಬಗೆಗೆ.

ನಿರ್ಣಯ : ಕನ್ನಡ ವಿಶ್ವವಿದ್ಯಾಲಯದ ಸಂಗೀತ ಮತ್ತು ನೃತ್ಯ ವಿಭಾಗದಲ್ಲಿ ಸಂಗೀತ ವಿಷಯದ ಖಾಯಂ ಅಧ್ಯಾಪಕರು ಇಲ್ಲದೆ ಇರುವುದರಿಂದ ಸಂಶೋಧನಾತ್ಮಕವಾಗಿ ವಿಭಾಗವನ್ನು ಹೆಚ್ಚು ಕ್ರಿಯಾಶೀಲಗೊಳಿಸುವ ದೃಷ್ಟಿಯಿಂದ ಅರ್ಹ ಬಾಹ್ಯ ಮಾರ್ಗದರ್ಶಕರನ್ನು ನಿಯೋಜಿಸಿಕೊಂಡು ಆಸಕ್ತ ವಿದ್ಯಾರ್ಥಿಗಳಿಗೆ ಪಿಎಚ್.ಡಿ. ಅಧ್ಯಯನಕ್ಕೆ ಅವಕಾಶ ಕಲ್ಪಿಸಲು ಸಭೆಯು ಅನುಮೋದನೆ ನೀಡಿತು.

ಕುಲಸಚಿವರು
ಪದನಿಮಿತ್ತ ಕಾರ್ಯದರ್ಶಿ

ಕುಲಪತಿಗಳು
ಅಧ್ಯಕ್ಷರು